**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.**

ಓ.ಎಸ್ ಸಂಖ್ಯೆ.**1160/2022** ಪಿ.ಡಬ್ಲೂ .1

ದಿನಾಂಕಃ 27-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದಃ-

ನಾನು 10 ನೇ ತರಗತಿವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ಇಂಗ್ಲೀಷ್ ಅಷ್ಟಾಗಿ ಬರುವುದಿಲ್ಲ. ದಾವೆ ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನನ್ನ ತಂದೆ ನೀಡಿರುತ್ತಾರೆ. ಆ ಸಂದರ್ಭದಲ್ಲಿ ನನಗೆ ಸದರಿ ವಿಚಾರಗಳು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಪಕ್ಕದ ಮನೆಯ ವಾಸಿ ಎಂದರೆ ಸರಿ. ಅದನ್ನು ನಾವು 1 ನೇ ಪ್ರತಿವಾದಿಗೆ ಬಾಡಿಗೆ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಬಾಡಿಗೆ ಪತ್ರವನ್ನು ಹಾಜರು ಮಾಡಲು ಆಗುತ್ತದೆಯೇ ಎಂದರೆ ಸಾಕ್ಷಿ ಬಾಯಿ ಮಾತಿನಲ್ಲಿ ಬಾಡಿಗೆ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಮನೆ ಮುನಿಯಮ್ಮ ಮತ್ತ ಮುನಿದಾಸಪ್ಪನವರಿಗೆ ಸೇರಿದ್ದು, 1 ನೇ ಪ್ರತಿವಾದಿ ಅವರ ಸಾಕು ಮಗಳಾಗಿದ್ದು, ಮಗಳಿಗಿಂತಲೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ಆ ಕಾರಣದಿಂದಲೇ ಮರಣ ಶಾಸನ ಪತ್ರದಲ್ಲಿ ಖಾಸ ಮಗಳು ಎಂದು ಬರೆದಿದ್ದು, ಅದನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ಪೊಲೀಸರಿಗೆ ಸಿ.ಆರ್. 290/2013 ರಂತೆ ದೂರು ನೀಡಿದ್ದೇನೆ ಎಂದರೆ ಸರಿ. ನಾನು ಬೆಳೆದಿರುವ ಬೆಳೆಯನ್ನು ಕಳವು ಮಾಡಿಕೊಂಡು ಹೋದ ಬಗ್ಗೆ ದೂರು ನೀಡಿದ್ದೆ ಎಂದು ನುಡಿಯುತ್ತಾರೆ. ನಾನು ಸದರಿ ದೂರನ್ನು ವಿಲ್ ಮತ್ತು ಮುಚ್ಚಳಿಕೆ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದಾರೆಂದು ದೂರು ನೀಡಿದ್ದೇ ಎಂದರೆ ಸುಳ್ಳು. ನಾನು ಆ ಬಗ್ಗೆ ಬೇರೆ ದೂರು ನೀಡಿದ್ದೇನು. ಕ್ರೀಮಿನಲ್ ಪ್ರಕರಣದಲ್ಲಿ ವಿಲ್ ಮತ್ತು ಮುಚ್ಚಳಿಕೆ ಪತ್ರದ ಬಗ್ಗೆ FSL ವರದಿ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ FSL ವರದಿಯಲ್ಲಿ ಹೆಬ್ಬೆಟ್ಟಿನ ಗುರುತು ಮುನಿಯಮ್ಮನದ್ದು ಎಂದು ಬಂದಿರುತ್ತದೆ ಎಂದರೆ ಸುಳ್ಳು. ನಾನು ನೀಡಿದ್ದ ಸದರಿ ದೂರು ವಜಾ ಆಗಿರುತ್ತದೆ ಎಂದರೆ ಸುಳ್ಳು. ನಾನು ಪ್ರತಿವಾದಿಗಳಿಗೆ ಆಯುಧಗಳಿಂದ ಹಲ್ಲೆ ಮಾಡಿದ್ದು ನನ್ನ ವಿರುದ್ಧ

ಕ್ರೀಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸಾಕ್ಷಿ ಅದು ವಜಾ ಆಗಿರುತ್ತದೆ ಎಂದು ನುಡಿಯುತಾರೆ. ನಾನು ಈಗ ನೋಡುತ್ತಿರುವ ದಾಖಲೆ ಸದರಿ ಪ್ರಕರಣದ ತೀರ್ಪು ಎಂದರೆ ಗೊತ್ತಿಲ್ಲ. ಸದರಿ ತೀರ್ಪಿನಂತೆ ನನಗೆ ಶಿಕ್ಷೆಯಾಗಿರುತ್ತದೆ ಎಂದರೆ ಸಾಕ್ಷಿ ಅಪೀಲಿನಲ್ಲಿ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿ ಕಾಳಪ್ಪನಹಳ್ಳಿಯಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅವರು ಮಾಲ್ಲೂರು ತಾಲ್ಲೂಕು ಚೀತನಾಯಕನಹಳ್ಳಿಯಲ್ಲಿ ಜನಿಸಿರುತ್ತಾರೆ. ಅವರು ಕಾಳಪ್ಪನಹಳ್ಳಿಯಲ್ಲಿ ವಿಧ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ 1 ನೇ ಪ್ರತಿವಾದಿಯ ಮಕ್ಕಳು ಸಹ ಕಾಳಪ್ಪನಹಳ್ಳಿಯಲ್ಲಿ ಹುಟ್ಟಿ ಬೆಳೆದು, ವಿಧ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸುಳ್ಳು. ಈಗ್ಗೆ 15 ವರ್ಷಗಳಿಂದ ಕಾಳಪ್ಪನಹಳ್ಳಿಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ತನ್ನ ಗಂಡನ ಮನೆ ವಾಗಟ ಗ್ರಾಮದಲ್ಲಿ ವಾಸ ಇದ್ದಾರೆ. 1 ನೇ ಪ್ರತಿವಾದಿಯ ಮಕ್ಕಳು ಕಾಳಪ್ಪನಹಳ್ಳಿಯಲ್ಲಿ ವಿಧ್ಯಾಭ್ಯಾಸ ಮಾಡಿರುವ ಬಗ್ಗೆ ದಾಖಲೆ ಇದೆ ಎಂದರೆ ಸಾಕ್ಷಿ ಸೃಷ್ಟಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಮುಂದೂವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.